೧೭

ಅಣ್ಣಿಗದೇವ ಪ್ರಾಪ್ತ ವಯಸ್ಕನಾದನು. ಈ ವೇಳೆಗೆ ಲಕ್ಕುಂಡಿಯಲ್ಲಿ ಭವ್ಯವಾದ ಜಿನಾಲಯ ನಿರ್ಮಾಣವಾಯಿತು. ಮೂರ್ತಿಗಳಲ್ಲಿ ಬಾಹುಬಲಿಯ ಮೂರ್ತೀ, ದೇಗುಲಗಳಲ್ಲಿ ಲಕ್ಕುಂಡಿಯ ದೇಗುಲ, ಇವಕ್ಕೆ ಹೊಯ್ಕೈಯಾಗಿ ನಿಲ್ಲುವ ಮೂರ್ತಿಯೂ ಇಲ್ಲ ದೇಗುಲವೂ ಇಲ್ಲ ಎಂದು ಲೋಕ ಕೊಂಡಾಡಿತು. ಲಕ್ಕುಂಡಿ ರಾಜಧಾನಿಯಾಗಲು ಬೇಕಾದ ಎಲ್ಲ ಸಿದ್ಧತೆಗಳೂ ಪೂರೈಸಿದವು. ಕೋಟೆ ,ಕೊತ್ತಲ ಅಗಳು. ಅರಮನೆ, ಗುರುಮನೆ ಇವೆಲ್ಲ ಅತ್ತಿಮಬ್ಬೆಯ ನೇತೃತ್ವದಲ್ಲಿ ನಿರ್ಮಾಣಗೊಂಡವು.

ಲಕ್ಕುಂಡಿ ಜಿನಾಲಯದಲ್ಲಿ ಜಿನಮೂರ್ತಿಯ ಪಂಚಕಲ್ಯಾಣ ನಡೆಯಬೇಕು. ಜಿನೇಂದ್ರನ ಪ್ರತಿಷ್ಠೆಯಾಗಬೇಕು. ಅರಮನೆಯ ಗೃಹಪ್ರವೇಶ ಮಾಡಬೇಕು, ಅಣ್ಣಿಗೆ ನಿಗೆ ಮದುವೆಮಾಡಬೇಕು. ಇವನ್ನೆಲ್ಲ ಒಮ್ಮೆಗೆ ಮಾಡಿಬಿಡೋಣ ವೆಂದು ಅತ್ತಿಮಬ್ಬೆ ಯೋಚಿಸಿದಾಗ ಹಿರಿಯರೆಲ್ಲ ಒಡಂಬಟ್ಟರು . ಈಕೆಯ ಅಣ್ಣಂದಿರು ಐದುಜನ. ಐವರ ಮನೆಯಲ್ಲೂ ಹೆಣ್ಣುಗಳಿದ್ದವು. ಅವರೆಲ್ಲ ಅತ್ತಿಮಬ್ಬೆಗೆ ಸೊಸೆಯರಾಗಿ ಬರಲು ತಾಮುಂದು ನಾಮುಂದು ಎಂದು ಕಾತರಗೊಂಡರು. ಆಲೆಮನೆಯನ್ನು ಕಂಡಾಗ ಮಕ್ಕಳಿಗೆಷ್ಟು ಆನಂದವೊ ಅವರಿಗೆಲ್ಲ ಅತ್ತಿಮಬ್ಬೆಯನ್ನು ಕಂಡೆರೇ ಅಷ್ಟೇ ಆನಂದ !

“ನನಗಿರುವುದು ಬಬ್ಬನೇ ಮಗ,. ನೀವೆಲ್ಲ ಹಟಮಾಡಿದರೆ ಹೇಗಾದೀತು ! ಯಾರಾದರೂ ನಿಮ್ಮಲ್ಲಿ ಇಬ್ಬರನ್ನು ನಮ್ಮ ಅಣ್ಣಿಗೆ ಮದುವೆ ಆದಾನು” ಎಂದು ಅತ್ತಿಮಬ್ಬೆ ತನ್ನ ಸೊಸೆಯರನ್ನೆಲ್ಲ ಕೂರಿಸಿಕೊಂಡು ತಿಳಿಸಿದಳು.

“ಅತ್ತೆ , ನಾನು ವಾರಿಗೆಯಾಗಿದ್ದೇನೆ. ಅಣ್ಣಿಭಾವನನ್ನು ನಾನೇ ಮದುವೆಯಾಗುವೆನು” ಎಂದು ಗುಂಡುಮಯ್ಯನ ಕಿರಿಯ ಮಗಳು ಜ್ವಾಲಾಮಾಲಿನಿ ಆತುರಗೊಂಡಳು

“ಅತ್ತೆ, ನಾನು ಎಲ್ಲರಿಗಿಂತ ಚೆನ್ನಾಗಿರುವೆನು ಭಾವ ನನ್ನನ್ನೇ ಒಪ್ಪಿರುವರು” ಎಂದು ಎಳಮಯ್ಯನ ನಡುವಲಮಗಳು ಸುಮತಿ ವಾದಿಸಿದಳು.

“ಅತ್ತೆ, ನಾನು ಇವರೆಲ್ಲರಿಗಿಂತ ದೃಢಕಾಯಳಾಗಿರುವೆನು. ಮಹಾರಾಣಿಯಾಗುಲು ನಾನೇ ಸರಿ !” ಎಂದು ಪೊನ್ನಮಯ್ಯನ ಎರಡನೆಯ ಮಗಳು ಚಂದ್ರಪ್ರಭ ಯುದ್ದಕ್ಕೆ ನಿಂತವಳಂತೆ ಕೂಗಾಡಿದಳು.

“ಅತ್ತೆ, ನಾನು ಎಲ್ಲರಿಗಿಂತ ಚೆನ್ನಾಗಿ ಹಾಡಬಲ್ಲೆ. ನಿಮ್ಮ ಮಗನನ್ನು ರಾಗಾಲಾಪನೆ ಯಲ್ಲೇ ತಲೆದೂಗಿಸಿ ಬಿಡುವೆನು. ದಿನವೂ ತಮಗೆ ಹಿತವಾಗುವಂತೆ ದೇವರನಾಮವನ್ನು ಹಾಡುವೆನು. ಮುಪ್ಪಿನಲ್ಲಿ ತಮಗೆ ಇದಕ್ಕಿಂತ ಹೆಚ್ಚಾಗಿ ಏನು ಬೇಕು ?” ಎಂದು ಆಹವಮ್ಮಲ್ಲನ ಹಿರಿಯ ಮಗಳು ಸೀತಲ ವಾದಿಸಿದಳು.

“ಅತ್ತೆ, ನಾನು ಚೆನ್ನಾಗಿ ನರ್ತಿಸುವೆನು. ಜಿನ್ನೇಂದ್ರನ ಪಂಚಕಲ್ಯಾಣಗಳನ್ನೂ ಕಣ್ಣಿಗೆ ಕಟ್ಟುವಂತೆ ಅಭಿವ್ಯಕ್ತಗೊಳಿಸುವೆನು. ಹಾಡುವುದರಲ್ಲೂ ನಾನು ಹಿಂದಿಲ್ಲ” ಎಂದು ವಲ್ಲನ ಜೇಷ್ಠ ಪುತ್ರಿ ಗುಂಗುರ ಕೂದಲ ಕನ್ನೆ ವಿಮಲ ತನ್ನ ವಾದವನ್ನು ಮಂಡಿಸಿದಳು.

“ನಿಮ್ಮಲ್ಲಿ ಎಲ್ಲರೂ ಸುರಸುಂದರಿಯರೇ ! ಬಬ್ಬರು ಬೇಡ ಬಬ್ಬರು ಬೇಕು ಎನ್ನುವಂತಿಲ್ಲ. ನಮ್ಮ ಅಣ್ಣಿಗ ಒಪ್ಪಿದರೆ ಎಲ್ಲರನ್ನೂ ಮನೆದುಬಿಸಿಕೊಳ್ಳುವೆನು” ಎಂದು ಅತ್ತಿಮಬ್ಬೆ ಅಡ್ಡಗೋಡೆಯ ಮೇಲೆ ದೀಪವಿಟ್ಟಂತೆ ಮಾತಾಡಿದಳು.

ಸೀತಲ, ವಿಮಲ ಇವರನ್ನು ಅಣ್ಣಿಗ ಒಪ್ಪಿಕೊಂಡನ್ನು ಒಂದೇ ಹಸೆಯಲ್ಲಿ ಮದುವೆ ಪೂರೈಸುವಂತೆ ತೀರ್ಮಾನವಾಯಿತು. ಲಕ್ಕುಂಡಿಯನ್ನು ಅಮರಾವತಿಯಂತೆ ಸಿಂಗರಿಸಿದರು. ಪಂಚಕಲ್ಯಾಣ ನಡೆದು ಜಿನಮೂರ್ತಿಯ ಪ್ರತಿಷ್ಠೆಯಾಯಿತು. ಅನಂತರ ಅಣ್ಣಿಗನ ಮದುವೆ ನಡೆಯಿತು. ಏಕಕಾಲದಲ್ಲಿ ಸೀತಲ ಮತ್ತು ವಿಮಲ ಇಬ್ಬರನ್ನೂ ಅತ್ತಿಮಬ್ಬೆ ಮನೆದುಂಬಿಸಿಕೊಂಡಳು .ಈ ಸಂದರ್ಭದಲ್ಲಿ ರನ್ನನ ಅಜಿತಪುರಾಣದ ಪ್ರಾಕಾಶನವನ್ನೂ ಇಟ್ಟುಕೊಂಡರು.

ಅಜಿತನಾಥ ಎರಡನೆಯ ತೀರ್ಥಂಕರ. ಆದಿನಾಥನ ದಿವ್ಯಚರಿತೆಯನ್ನು ಹಿಂದಾಗಲೆ ಪಂಪಕವಿ ರಚಿಸಿದ್ದನು.ಈಗ ಅಜಿತನಾಥ ಪುಣ್ಯ ಚರಿತೆಯನ್ನು ಕವಿಚಕ್ರಿ ರನ್ನ ವಿರಚಿಸಿದನು.

ಅಯೋಧ್ಯೆಯಲ್ಲಿ ಜಿತಶತ್ರು ಆಳುತ್ತಿದ್ದನು. ಈತನ ಮನೋವಲ್ಲಭೆ ವಿಜಯ ಸೇನಾದೇವಿ. ಈ ದಂಪತಿಗಳಿಗೆ ಅಜಿತ ತೀರ್ಥಂಕರ ಮಗನಾಗಿ ಜನಿಸಿದನು. ಈ ಸಂದರ್ಭದಲ್ಲಿ ದೇವಲೋಕವೇ

ಬುವಿಗಿಳಿದು ಅಹಿಂಸಾಧರ್ಮದ ಪ್ರಭಾವನೆಯೆಸಗಲು ಜನಿಸಿದ ಅಜಿತಸ್ವಾಮಿಗೆ ಸತ್ಕಾರ ಸಮಾರಂಭಗಳನ್ನು ಆಚರಿಸಿದರು. ಪ್ರಾಪ್ತ ವಯಸ್ಕನಾದ ಅಜಿತಸ್ವಾಮಿಗೆ ಒಂದು ಸಹಸ್ರಮಂದಿ ಕನ್ನೆಯರನ್ನು ತಂದು ಮದುವೆ ಮಾಡಿದರು. ಯುವರಾಜಪಟ್ಟವನ್ನು ಕಟ್ಟಿದರು. ಸಹಸ್ರಮಂದಿ ಲೋಲಾಕ್ಷಿಯರ ಜೊತೆ ರಾಸಲೀಲಾ ವಿನೋದದಲ್ಲಿ ಮುಳುಗಿ ಅನೇಕ ವರ್ಷ ಅಜಿತನಾಥ ಸಂಸಾರಸುಖದಲ್ಲಿ ಹಾಯಾಗಿದ್ದನು. ಒಮ್ಮೆ ಉಲ್ಕಾಪಾತವನ್ನು ಕಂಡು ಈ ಮಹಾನುಭಾವ ಸಂಸಾರವೂ ಒಂದು ಉಲ್ಕಾಪಾತವೆಂದು ಪರಿಗಣಿಸಿ ಕೂಡಲೆ ಸರ್ವಸಂಗ ಪರಿತ್ಯಾಗಿಯಾಗಿ ದಿಗಂಬರನಾದನು !ಅನೇಕವರ್ಷ ಅಜಿತನಾಥ ಜೀವದ ಹಾಗೂ ಕರ್ಮದ ಸ್ವರೂಪವನ್ನು ಕುರಿತು ಚಿಂತನೆಮಾಡಿ ಕೊನೆಗೆ ಅವೆರಡನ್ನೂ ಬೇರ್ಪಡಿಸುವ ಕಲೆಯಲ್ಲಿ ಪಾರಂಗತನಾದನು ! ತಪಸ್ಸು ಪರಿಪೂರ್ಣವಾಯಿತು. ಘಾತಿಕರ್ಮಗಳು ಕರಗಿಹೋದವು.ಅಜಿನಾಥ ಈಗ ಜಿನೇಂದ್ರನಾದನು !ದೆವತೆಗಳು ಭಕ್ತಿಯಿಂದ ನಿರ್ಮಿಸಿದ ಸಮವಸರಣದಲ್ಲಿ ನೆಲಸಿ ಈ ಪರಮಾತ್ಮ ಮೂರು ಲೋಕಕ್ಕೂ ತನ್ನ ತಪಸ್ಸನ್ನೂ, ಜೀವ ಹಾಗು ಕರ್ಮಗಳ ಸಖ್ಯವನ್ನೂ ಅದರಿಂದ ಆಗಬಹುದಾದ ಅನಾಹುತವನ್ನೂ, ಕರ್ಮದಿಂದ ಪಾರಾಗುವ ಮಾರ್ಗವನ್ನೂ ಸರ್ವಭಾಷಾಮಯಿಯಾದ ದಿವ್ಯಧ್ವನಿಯಿಂದ ಬಿತ್ತರಿಸಿದನು. ಭವ್ಯಕೋಟಿ ಜಿನಾವಣಿಯನ್ನಾಲಿಸಿ ಹಿಗ್ಗಿ ಹೋಯಿತು !

ಈ ತೀರ್ಥಂಕರನ ಕಾಲದ ಚಕ್ರವತಿಯಾದ ಸಗರ ಚರಿತೆಯನ್ನೂ ರನ್ನಕವಿ ತನ್ನ ಅಜಿತಪುರಾಣದಲ್ಲಿ ಬಣ್ಣಿಸಿರುವನು. ಸಗರ ಅಯೋಧ್ಯೆಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಷಟ್‌ಖಂಡಾಧಿಪತಿಯಾಗಿ ವಿಜೃಂಭಿಸಿದನು. ವೃಷಭಾಚಲದಲ್ಲಿ ಹಿಂದೆ ಭರತೇಶ ವಿಜಯಶಾಸನವನ್ನು ಬರೆಸಿ ತನ್ನ ಮಹತ್ವಾಕಾಂಕ್ಷೆಗೆ ಮೆರಗು ಹಾಕಿದ್ದನು. ಅದೇ ಸ್ಥಳದಲ್ಲಿ ಭರತೇಶನ ಶಾಸನದ ಪಕ್ಕದಲ್ಲೇ ಸಗರ ಚಕ್ರವರ್ತಿ ತನ್ನ ಶಾಸನವನ್ನೂ ಕವಿರತ್ನನಿಂದ ಬರೆಸಿದನು. ತೊಂಬತ್ತಾರು ಸಹಸ್ರಮಂದಿ ಲೋಲಾಕ್ಷಿಯರು. ಅರವತ್ತು ಸಹಸ್ರ ಜನ ಮಕ್ಕಳು, ಆರು ಖಂಡದ ಚಕ್ರಾಧಿಪತ್ಯ ಇವುಗಳಲ್ಲಿ ಸಿಕ್ಕಿ ಸಗರಚಕ್ರವರ್ತಿ ಸಂಸಾರ ಸಾಗರದಲ್ಲಿ ಪೂರ್ತ ಮುಳುಗಿ ಹೋದನು. ಈತನನ್ನು ಎಚ್ಚರಿಸಿ ಆತ್ಮವಿಕಾಸನ ಕಾರ್ಯದಲ್ಲಿ ಪ್ರೇರೇಪಿಸಬೇಕೆಂದು ಈತನ ಭವಾಂತರದ ಸ್ನೇಹಿತ ಮಣಿಕೇತು ಒಂದೆರಡುಬಾರಿ ಪ್ರಯತ್ನಿಸಿ ವಿಫಲನಾಗಬೇಕಾಯಿತು. ಹೀಗೇ ಇರಲು ಸಗರನ

ಅರವತ್ತು ಸಹಸ್ರಮಂದಿ ಮಕ್ಕಳೂ ಬೇಸರವನ್ನು ನೀಗುವುದಕ್ಕಾಗಿ ಕೈಲಾಸಪರ್ವತದ ಸುತ್ತ ಕಂದಕ ತೋಡಲು ಹೋದರು. ! ಇದ್ದಕ್ಕಿದ್ದಂತೆ ಮಣಿಕೇತು ತನ್ನ ವಿದ್ಯಾಬಲದಿಂದ ಸಗರನ ಮಕ್ಕಳೆಲ್ಲ ಸುಟ್ಟು ಹೋದಂತೆ ಕಣ್ಣುಕಟ್ಟು ಮಾಡಿದನು. ಅವರಲ್ಲಿ ಭಗೀರಥನೊಬ್ಬ ಉಳಿದುಕೊಂಡು ಓಡೋಡಿ ಬಂದು ತನ್ನ ಸೋದರರೆಲ್ಲರ ಸಾವನ್ನೂ ಸಗರನಿಗೆ ತಿಳಿಸಿದನು. ಇದೇ ಸಂದರ್ಭದಲ್ಲಿ ಮಣಿಕೇತು ವಿಪ್ರನಂತೆ ವೇಷ ಧರಿಸಿ ತನಗಿದ್ದ ಬಬ್ಬನೇ ಮಗನನ್ನು ಜವರಾಯ ಕೊಂದನೆಂದೂ ಅವನನ್ನು ಉಳಿಸಬೇಕೆಂದೂ ಸಗರನ ಬಳಿ ಬಂದು ಬೊಬ್ಬೆಹಾಕುವನು. ಸಗರನ ಹೆಂಡತಿಯರೆಲ್ಲ ಬಂದು ತಂತಮ್ಮ ಮಕ್ಕಳನ್ನು ಬದುಕಿಸಬೇಕೆಂದು ಆಕ್ರಂದನವೆಸಗಿದರು. ಈತನ ಸೊಸೆಯರೆಲ್ಲ ಒಟ್ಟಾಗಿ ಬಂದು ಎದೆಚಚ್ಚಿಕೊಂಡು ಕಂಬನಿಯ ಕಡಲನ್ನೇ ಸೃಷ್ಟಿಸಿದರು. ಈ ಬೊಬ್ಬೆಯ ನಡುವೆ ಸಗರನಿಗೆ ಸಂಸಾರದ ಅನಿತ್ಯತೆಯ ಅರಿವಾಯಿತು ! ಸಗರ ಮನೆಯನ್ನು ತೊರೆದನು, ಮಡದಿರಿಗೆಲ್ಲ ಕೈ ಕೊಟ್ಟನು. ಮಕ್ಕಳ ಶವಗಳನ್ನೂ ನೋಡದೆ ದಿಗಂಬರನಾದನು ! ಅತ್ತ ಕಣ್‌ಕಟ್‌ವಿದ್ಯೆಗೆ ಸಿಕ್ಕಿ ಸತ್ತಂತೆ ಶವಗಳಾಗಿದ್ದ ಮಕ್ಕಳೆಲ್ಲ ಎಚ್ಚರಗೊಂಡರು. ತಂದೆಯ ನಿರ್ವೇಗವನ್ನು ತಿಳಿದುಕೊಂಡರು. ಅವರಿಗೂ ಕಣ್ಣಿನ ಕತ್ತಲೆ ಕತ್ತಲೆ ಹೋಯಿತು. ವೈರಾಗ್ಯದ ಹುಚ್ಚು ಹೊಳೆಯಲ್ಲಿ ಅವರೆಲ್ಲ ಕೊಚ್ಚಿ ಹೋಗಿ ದಿಗಂಬರರಾದರು ಕೆಲಕಾಲ ಕಳೆದಮೇಲೆ ಭಗೀರಥನೂ ತನ್ನ ಮಗ ವರದತ್ತನಿಗೆ ಪಟ್ಟಕಟ್ಟಿ ದಿಗಂಬರನಾಗಿ ತಪವೆಸಗಿದನು ! ಎಲ್ಲರೂ ಕರ್ಮಕ್ಷಯಮಾಡಿದರು. . . . .ರನ್ನಕವಿ ಅಜಿತನಾಥನ ಹಾಗು ಸಗರನ ದಿವ್ಯಚರಿತೆಯನ್ನು ಅತ್ತಿಮಬ್ಬೆಯ ಬಳಗದಲ್ಲಿ ಹಾಡಿದನು, ಎಲ್ಲರೂ ತಲೆದೂಗುವಂತೆ ಬಣ್ಣಹಚ್ಚಿ ಬಣ್ಣಿಸಿದನು.

ಅಜಿತನಾಥಚರಿತೆಯಲ್ಲಿ ರನ್ನಮಹಾಕವಿ ಅತ್ತಿಮಬ್ಬೆಯನ್ನು ಕೊಂಡಾಡಿ ಕುಣ್ಣಿದಿರುವನು ! ಮಹಾಕವಿ ಕೊಂಡಾಡಲು ನಿಂತಾಗ ಸಹಸ್ರ ಜಿಹ್ವೆಗಳು ಉದಿಸುವುವೋ ಏನೋ ! ಅತ್ತಿಮಬ್ಬೆಯ ದಿವ್ಯಜೀವನವನ್ನೇ ರನ್ನಕವಿ ಅಜಿತಸ್ವಾಮಿಯ ಪುಣ್ಯಚರಿಕ್ಕೆ ಮುನ್ನುಡಿಯಾಗಿ ಬಣ್ಣಿಸಿರುವನು. ಅತ್ತಿಮಬ್ಬೆಯ ವಂಶಚಿತ್ರವನ್ನು ಮಹಾಕವಿ ಎಂದೆಂದಿಗೂ ನಿಲ್ಲುವಂತೆ ಚಿರಸ್ಥಾಯಿಗೊಳಿಸಿರುವನು. ಅತ್ತಿಮಬ್ಬೆಯ ಸಮ್ಯಕ್ತ್ವಕ್ಕೆ ಕಲೆಯ ಒಪ್ಪ ಹಾಕಿರುವನು. ಆಕೆಯ ಭವ್ಯತೆಗೆ ಬಣ್ಣಕಟ್ಟಿ ಬಣ್ಣಿಸಿರುವನು. ಪೌರಾಣಿಕ ಮಹಿಳಾರತ್ನಗಳಿಗೆ ಅತ್ತಿಮಬ್ಬೆ ಯಾವ. ವಿಧದಲ್ಲೂ ಕಡಿಮೆಯಿಲ್ಲವೆಂದು ಸಾರಿರುವನು.

ಹೆಚ್ಚೇನು ಜಿನಜನನಿಗೆ ಹೊಯ್‌ಕೈಯಾಗಿ ಕನ್ನಡ ಕನ್ಯೆ ಚಾರಿತ್ರದಲ್ಲಿ ಸಂಸ್ಕಾರದಲ್ಲಿ ಸಂಪನ್ನತೆಯಲ್ಲಿ ಮೆರೆಯುವಳೆಂದು ರನ್ನಕವಿ ಎದೆತಟ್ಟಿ ಹೇಳಿರುವನು. "ಬುಧಜನವಂದಿದೆ ! ಕವಿವರ ಕಾಮಧೇನು ! ಚಕ್ರವರ್ತಿ ಪೂಜಿತೆ ! ಜಿನಶಾಸನ ಪ್ರದೀಪಿತ !ದಾನಚಿಂತಾಮಣಿ !ವಿನಯ ಚೂಡಾಮಣಿ ! ಸಮ್ಯಕ್ತ್ವ ಶಿರೋಮಣಿ !ಶಿಲಾಲಂಕೃತೆ !ಗುಣಮಾಲಾಲಂಕೃತೆ !" ಎಂಬುದಾಗಿ ಅತ್ತಿಮಬ್ಬೆಯನ್ನು ರನ್ನಕವಿ ಮೈಯುಬ್ಬಿ ಕೊಂಡಾಡಿರುವನು !

ರನ್ನನ ಅಜಿತಪುರಾಣವನ್ನು ಅತ್ತಿಮಬ್ಬೆ ಸಹಸ್ರಪ್ರತಿ ಮಾಡಿಸಿದಳು. ರನ್ನನನ್ನು ಬಂಗಾರದಲ್ಲಿ ತುಲಾಭಾರ ತೂಗಿಸಿದಳು ! "ಕನ್ನಡ ಭಾಷಾಮೃತವನ್ನು ಕರೆದು ಕಾಸಿ ಕೆನೆಗಟ್ಟಿಸಿದನು ಪಂಪ !ಅದನ್ನೇ ಮಥಿಸಿ ಬೆಣ್ಣೆ ತೆಗೆದವನು ಪೊನ್ನ ! ಬೆಣ್ಣೆಯನ್ನು ಕಾಸಿ ಕಂಪುಮೂಡಿಸಿ ಬಣ್ಣ ಕಟ್ಟಿದವನು ರನ್ನ !ಈ ಮೂವರೆ ಕನ್ನಡ ಸಾಹಿತ್ಯಕ್ಕೆ ರತ್ನತ್ರಯರು. ನಾನು ದಾನಚಿಂತಾಮಣಿಯಾದರೆ ನನ್ನ ಮಗ ರನ್ನ ದಾನಚಿಂತಾಮಣಿಗಳನ್ನು ಸಮ್ಯಕ್ತ್ವ ಚೂಡಾಮಣಿಗಳನ್ನು ಮಾತ್ರ ಕೊಂಡಾಡುವ ವಂದಿಮಾಗಧ ಶಿರೋಮಣಿಯಾಗಿರುವನು !" ಎಂದು ಹೇಳಿ ಅತ್ತಿಮಬ್ಬೆ ಎಲ್ಲರನ್ನೂ ನಗೆಗಡಲಲ್ಲಿ ತೀಲಿಸಿದಳು !

ಭ್ರಾಂತೇನಾದಿಪುರಾಣದ
ಶಾಂತಿಪುರಾಣದ ಸಮಾನಮನೆ ಕೃತಿಯಂ ಕ
ಲ್ಪಾಂತಸ್ಥಾಯಿಯನಾಶ್ರಿತ
ಚಿಂತಾಮಣಿಗತ್ತಿಮಬ್ಬೆಗಳ್ತಿಯೆ ಪೇಳ್ವೆಂ